**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್. ಎಫ್. ಸಿ ನ್ಯಾಯಾಧೀಶರ ನ್ಯಾಯಾಲಯ ಯಾದಗಿರಿ.**

**ಸಿಸಿ ನಂ. 71/2018**

| | | |
|---|---|---|
| ಸಾಕ್ಷಿಯ ಹೆಸರುಃ | ಮರೆಪ್ಪ | ಪ್ರಾಸಾಃ 1 |
| ತಂದೆ/ಗಂಡನ ಹೆಸರುಃ | ಮೋನಪ್ಪ | ಚಾಸಾಃ 1 |
| ವಯಸ್ಸು ಃ | 52 ವರ್ಷ | ದಿಃ 10-08-2023 |
| ಉದ್ಯೋಗಃ | ಕೂಲಿಕೆಲಸ | ಸಾಕ್ಷಿದಾರರಿಗೆ ಪ್ರಮಾಣ ವಚನ ಭೋದಿಸಲಾಯಿತು. |
| ವಾಸ ಸ್ಥಳಃ | ಠಾಣಾಗುಂದಿ | |

<u>ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ</u>

ನನಗೆ ಚಾಸಾಃ 4 ರಿಂದ 6 ರವರ ಪರಿಚಯವಿದೆ . ನನಗೆ ಆರೋಪಿತನ ಪರಿಚಯವಿದೆ. ದಿನಾಂಕಃ 28-06-2017 ರಂದು ಮುಂಜಾನೆ 9-00 ಗಂಟೆಗೆ ನನ್ನ ಹೆಂಡತಿ ಚಾಸಾಃ 4 ರವರು ಮನೆಯ ಮುಂದೆ ಬಟ್ಟೆ ಒಗೆಯುವಾಗ ಮನೆ ಮುಂದೆ ಇರುವ ಕಟ್ಟಿಗೆ ಚಕ್ಕೆಯ ಮೇಲೆ ನೀರು ಚೆಲ್ಲಿದಾಗ ಆರೋಪಿತನು ಬಂದು ಇಲ್ಲಿ ಯಾಕೆ ನೀರು ಚೆಲ್ಲುತ್ತಿಯಾ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ. ನಾನು ಸದರಿ ವಿಷಯದ ಬಗ್ಗೆ ಆರೋಪಿತನಿಗೆ ಕೇಳಿದಾಗ ಅವನು ನನಗೆ ಅವಾಚ್ಯ ಶಬ್ದಗಳಿಂದ ಬೈದು, ಕಟ್ಟಿಗೆಯಿಂದ ಹೊಡೆದಿರುತ್ತಾನೆ. 2 ನೇ ಆರೋಪಿತಳು ನನ್ನ ಹೆಂಡತಿಗೆ ಹೊಡೆದಿರುತ್ತಾಳೆ. 4 ನೇ ಆರೋಪಿತಳು ನನ್ನ ಹೆಡಂತಿಗೆ ಬಂದು ಹೊಡೆದಿರುತ್ತಾಳೆ. ನನ್ನ ತಂದೆ ಅಂದರೆ 3 ನೇ ಆರೋಪಿತನು ನನಗೆ ಹೊಡೆದಿರುತ್ತಾನೆ. ಚಾಸಾಃ 4 ಮತ್ತು ಚಾಸಾಃ 5 ರವರು ಬಂದು ಜಗಳವನ್ನು ಬಿಡಿಸಿರುತ್ತಾರೆ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಅದು ದೂರು ಆಗಿದ್ದು ಅದನ್ನು ಸಾಕ್ಷಿಯು ನೋಡಿ ಗುರುತಿಸಿರುವುದರಿಂದ, ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಜಗಳವಾದ ಸಮಯದಲ್ಲಿ ಬಳಸಿದ ಕಟ್ಟಿಗೆಯನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ನೋಡಿ ಗುರುತಿಸಿರುವುದರಿಂದ, ಅದನ್ನು ಮು.ಮಾ. 1 ಮತ್ತು 2 ಎಂದು ಗುರುತಿಸಲಾಯಿತು.

<u>ಪಾಟಿ ಸವಾಲುಃ ಆರೋಪಿತರ ಪರ ವಕೀಲರು ಶ್ರೀ ಎಮ್ ಬಿ ಪಿ . ಇವರಿಂದಃ</u>

1. ಆರೋಪಿತನು ನನ್ನ ವಿರುದ್ಧ ಪ್ರಧಾನ ಸಿವಿಲ್ ನ್ಯಾಯಾಲಯ ಯಾದಗಿರಿಯಲ್ಲಿ ಅಸಲು ದಾವೆ ನಂಬರ 205/2014 ಪಾಲು ವಾಟನಿ ಕೋರಿ ದಾವೆಯನ್ನು ಸಲ್ಲಿಸಿದ್ದ ಎಂದರೆ ಸರಿ. ಸದರಿ ದಾವೆಯಲ್ಲಿ ಡಿಕ್ರಿಯಾಗಿರುತ್ತದೆ ಎಂದರೆ ಸರಿ. ಸದರಿ ಡಿಕ್ರಿಯ ಪ್ರಕಾರ ಅಳತೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ನನ್ನ ಹೆಂಡತಿಯ ಕಡೆಯಿಂದ ಆರೋಪಿತರ ವಿರುದ್ಧ 954/2017 ಕ್ರಿಮಿನಲ್ ಕೇಸನ್ನು ದಾಖಲಿಸಿರುತ್ತೇನೆ ಎಂದರೆ ಸರಿ. ನನ್ನ ತಂದೆ ಮರಣ ಹೊಂದಿರುತ್ತಾರೆ ಎಂದರೆ ಸರಿ. ನನ್ನ ತಾಯಿಗೆ ಆರೋಗ್ಯ ಸರಿ ಇರುವುದಿಲ್ಲ ಎಂದರೆ ಸರಿ. ಸದರಿ ಸಿ.ಸಿ. ನಂಬರ 954/2017 ರಲ್ಲಿ ಆರೋಪಿತರು ದೋಷಮುಕ್ತ ಎಂದು ಖುಲಾಸೆಯಾಗಿರುತ್ತದೆ ಎಂದರೆ ಸರಿ. ಸದರಿ ಪ್ರಕರಣವನ್ನು ಆರೋಪಿತರಿಗೆ ತೊಂದರೆ ಕೊಡುವ ಉದ್ದೇಶದಿಂದ ಹಾಕಿರುತ್ತೇನೆ ಎಂದರೆ ಸರಿಯಲ್ಲ.

2. ನಾನು ದಿನಾಲೂ ಒಕ್ಕಲುತನ ಕೆಲಸಕ್ಕೆ ಹೋಗುತ್ತೇನೆ ಎಂದರೆ ಸರಿ. ಬೆಳಿಗ್ಗೆ ಹೋಗಿ ಸಂಜೆ ಬರುತ್ತೇನೆ ಎಂದರೆ ಸರಿ. ನನ್ನ ಮನೆ ಮತ್ತು ಆರೋಪಿತರ ಮನೆ ಅಕ್ಕ-ಪಕ್ಕದಲ್ಲಿದೆ ಎಂದರೆ ಸರಿ. ಸಿ.ಸಿ ನಂಬರ 954/2017 ಸುಳ್ಳು ಕೇಸು ಹಾಕಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಪ್ರಕರಣ ಬಿಡುಗಡೆಯಾದ ನಂತರ ಪ್ರಸ್ತುತ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಚಾಸಾಃ 4 ಮತ್ತು ಚಾಸಾಃ 5 ರವರ ಮನೆ ನಮ್ಮ ಮನೆಯಿಂದ ದೂರ ಇದೆ ಎಂದರೆ ಸರಿ. ದಿನಾಂಕಃ 28-06-2017 ರಂದು ಯಾವುದೇ ಜಗಳವಾಗದೆ ಇದ್ದರೂ ಕೂಡ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ನನಗೆ ಮತ್ತು ನನ್ನ ಹೆಂಡತಿಗೆ ಹೊಡೆಯದಿದ್ದರೂ ಕೂಡ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರಿಗೆ ತೊಂದರೆ ಕೊಡುವ ಉದ್ದೇಶನಿಂದ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು ಯಾದಗಿರಿ**